1	2	3	4	5
			ಬಸವ ಕಲ್ಯಾಣ ಮತಕ್ಷೇತ್ರ	
			1) ಬಸವಕಲ್ಯಾಣ ಪರತಾಪೂರ ತಾಂಡಾಲ ರಸ್ತೆ ಸುಧಾರಣೆ ಕಿಮೀ 0 ದಿಂದ 2	30.00
			2) ಭೋಸಗಾ ಮುಡಬಿ ರಸ್ತೆ ಸುಧಾರಣೆ ಕಿಮಿ 0 ದಿಂದ 6	60.00
			3) ಬಸವಕಲ್ಯಾಣ ರಾಜೋಳ ರಸ್ತೆಯ ಕಿಮಿ 0 ದಿಂದ 3.50 ವರೆಗೆ ರಸ್ತೆ ಸುಧಾರಣೆ	60.00
5	ಹುಮ್ನಾ 3054		**ಹುಲಸೂರು ಮತಕ್ಷೇತ್ರ**	
	ಬಾದ ಮುಖ್ಯ. ಮಂತ್ರಿ ಗ್ರಾಮೀಣ ಅಭಿವೃದ್ಧಿ ಯೋಜನೆ		1) ಹುಮ್ನಾಬಾದ ಘೋಡೆವಾಡಿ ವಾಯಾ ಮಾಣಿಕನಗರ ಘಾಟಬೋಟಾಳ ರಸ್ತೆ ಸುಧಾರಣೆ ಕಿಮಿ 0 ದಿಂದ 11 ವರೆಗೆ	26.00
			ಹುಮ್ನಾ ಬಾದ ಮತಕ್ಷೇತ್ರ	
			1) ಉಡಚಾಳ ಹಳ್ಳಿಖೇಡ(ಬಿ) ರಸ್ತೆಯ ಕಿಮಿ 0 ದಿಂದ 6.80 ವರೆಗೆ ರಸ್ತೆ ಸುಧಾರಣೆ	28.75
			2) ಮಾಣಿಕನಗರ ಕೂಡು ರಸ್ತೆ ಕಿಮಿ 0 ದಿಂದ 1.40 ವರೆಗೆ	9.50
			3) ಭಂಗೂರು ಚಿಂಚೋಳಿ ರಸ್ತೆ ಕಿಮಿ 0 ದಿಂದ 13.20 ವರೆಗೆ	32.10
			4) ಎನ್.ಹೆಚ್-4 ದಿಂದ ನಿರ್ಣಾ ಬಸಂತಪೂರ ರಸ್ತೆ ಕಿಮಿ 0 ದಿಂದ 12 ವರೆಗೆ ರಸ್ತೆ ಸುಧಾರಣೆ	23.10
			5) ಹುಡಗಿ ಚಿಟಗುಪ್ಪಾ ಐನಾಪೂರ ರಸ್ತೆ ಕಿಮಿ 5.35 ರಿಂದ 16.45 ವರೆಗೆ ರಸ್ತೆ ಸುಧಾರಣೆ	51.55
			6) ಚಿಗಗುಪ್ಪಾದಿಂದ ರಾಜ್ಯ ಹೆದ್ದಾರಿ 19 ವಾಯಾ ವಳಖಂಡಿ ಕಿಮಿ 0 ದಿಂದ 1 ವರೆಗೆ ರಸ್ತೆ ಸುಧಾರಣೆ	5.00

813(1475) ಶ್ರೀ ರಾಜೇಂದ್ರ ವರ್ಮ: ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬರ ಪರಿಹಾರ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಬಿಡುಗಡೆಯಾದ ಹಣವೆಷ್ಟು – ತಾಲ್ಲೂಕುವಾರು ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ನೀಡುವುದು:

ಆ) ಕೂಲಿಗಾಗಿ ಕಾಳು ಯೋಜನೆಯಡಿ ಬೀದರ್ ಜಿಲ್ಲೆಗೆ ಹಾಗೂ ಹುಲಸೂರು ಕ್ಷೇತ್ರಕ್ಕೆ ಬಿಡುಗಡೆಯಾದ ಹಣ ಹಾಗೂ ಕಾಳಿನ ವಿವರಗಳನ್ನು ನೀಡುವುದು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಬೀದರ್ ಜಿಲ್ಲೆಗೆ 2004–05ರಲ್ಲಿ ಈವರೆಗೆ ರೂ. 200 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಸರ್ಕಾರದಿಂದ ಪ್ರತ್ಯೇಕವಾಗಿ ತಾಲ್ಲೂಕುವಾರು, ವಿಧಾನಸಭಾ ಕ್ಷೇತ್ರವಾರು ಹಣ ಬಿಡುಗಡೆ ಮಾಡುವುದಿಲ್ಲ.

ಆ) ಎಸ್.ಜಿ.ಆರ್.ವೈ (ವಿ.ಫ) ಯೋಜನೆಯಡಿಯಲ್ಲಿ 8650 ಮೆ.ಟನ್ ಆಹಾರಧಾನ್ಯ ಬಿಡುಗಡೆ ಮಾಡಲಾಗಿದೆ. ವಿಧಾನಸಭಾ ಕ್ಷೇತ್ರವಾರು, ತಾಲ್ಲೂಕುವಾರು ಪ್ರತ್ಯೇಕವಾಗಿ ಹಣ ಹಾಗೂ ಆಹಾರಧಾನ್ಯ ಬಿಡುಗಡೆ ಮಾಡಿರುವುದಿಲ್ಲ.

816(1159) ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್): ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸುನಾಮಿ ಪರಿಹಾರ ಕಾಮಗಾರಿಗಳಿಗಾಗಿ ವಿವಿಧ ಮೂಲಗಳಿಂದ ಇದುವರೆವಿಗೂ (ಜನವರಿ 10 ರವರೆಗೆ) ಮಾನ್ಯ ಮುಖ್ಯಮಂತ್ರಿಗಳಿಗೆ ಬಂದಿರುವ ಒಟ್ಟು ಮೊಬಲಗು ಎಷ್ಟು (ಪಟ್ಟಿಯನ್ನು ಒದಗಿಸುವುದು)

ಆ) ಈ ನಿಧಿಯಿಂದ ಮಾನ್ಯ ಮುಖ್ಯಮಂತ್ರಿಗಳು ಎಷ್ಟು ಹಣವನ್ನು ಇದುವರೆವಿಗೂ ವಿತರಿಸಿದ್ದಾರೆ? (ಬಾಬ್ತು ಮರು ವಿವರಣೆ ಪಟ್ಟಿಯನ್ನು ಒದಗಿಸುವುದು)

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :

ಅ) ರೂ. 12,38,43,208 ಗಳು

ಆ)

1)	ಮಾನ್ಯ ಪ್ರಧಾನ ಮಂತ್ರಿಯವರ ಪರಿಹಾರ ನಿಧಿಗೆ		
	(i)	ಸರ್ಕಾರದ ವತಿಯಿಂದ	ರೂ. 10 ಕೋಟಿ
	(ii)	ಸುನಾಮಿ ಭೂಕಂಪ ನಿಧಿಯಿಂದ	ರೂ. 10 ಕೋಟಿ
2)	(i)	ತಮಿಳುನಾಡು ರಾಜ್ಯಕ್ಕೆ	ರೂ. 2 ಕೋಟಿ
	(ii)	ಅಂಡಮಾನ್ ನಿಕೋಬಾರ್ ದ್ವೀಪಕ್ಕೆ	ರೂ. 1 ಕೋಟಿ
	(iii)	ಆಂಧ್ರಪ್ರದೇಶ ರಾಜ್ಯಕ್ಕೆ	ರೂ. 1 ಕೋಟಿ
	(iv)	ಲಕ್ಷ ದ್ವೀಪಕ್ಕೆ	ರೂ. 50 ಲಕ್ಷ
	(v)	ಪಾಂಡಿಚೇರಿ ರಾಜ್ಯಕ್ಕೆ	ರೂ. 50 ಲಕ್ಷ
	(vi)	ಕೇರಳ ರಾಜ್ಯಕ್ಕೆ	ರೂ. 50 ಲಕ್ಷ

ಇದಲ್ಲದೆ ಸುಮಾರು 392 ಮೆಟ್ರಿಕ್ ಟನ್‌ಗಳಷ್ಟು ಪರಿಹಾರ ಸಾಮಗ್ರಿಗಳನ್ನು ಅನಾಹುತದಿಂದ ನಿರಾಶ್ರಿತರಾದವರಿಗಾಗಿ ವಿವಿಧ ರಾಜ್ಯಗಳಿಗೆ ಕಳುಹಿಸಿ ಕೊಡಲಾಗಿದೆ.